**- 8 -**

**ಸಿ.ಸಿ. ಸಂಖ್ಯೆ 6597/ 2024**
**ಪಿ.ಡಬ್ಲೂ -01**

**ದಿನಾಂಕಃ 25.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲು ಃ- ಶ್ರೀ MN ಆರೋಪಿ ಪರ ವಕೀಲರಿಂದ.**

ಆರೋಪಿಯು ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿದೆಯೆ ಎಂದರೆ ಸಾಕ್ಷಿ ಅಡಿಕೆ ವ್ಯಾಪಾರ ಎಂದು ನುಡಿಯುತ್ತಾರೆ. ಅಡಿಕೆ ವ್ಯಾಪಾರ ಮಾಡಲು ಅಂಗಡಿ ಏನಾದರೂ ಇಟ್ಟಿದ್ದಾರೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಯಾವ ಊರಿನಲ್ಲಿ ಅಡಿಕೆ ವ್ಯಾಪಾರ ಮಾಡುತ್ತಿದ್ದರು ಎಂದರೆ ಸಾಕ್ಷಿ ಕುದೂರಿನಲ್ಲಿ ಎಂದು ನುಡಿಯುತ್ತಾರೆ. ವಿಳಾಸ ಗೊತ್ತಿದೆಯೆ ಎಂದರೆ ಸಾಕ್ಷಿ ಹುಲಿಕಲ್ ಎಂದು ನುಡಿಯುತ್ತಾರೆ. ಹುಲಿಕಲ್ ಗ್ರಾಮ ಹಾಗೂ ಕುದೂರು ಗ್ರಾಮ ಬೇರೆ ಬೇರೆ ಎಂದರೆ ಸಾಕ್ಷಿ ಹೌದು ಆರೋಪಿ ವಾಸ ಇರುವುದು ಕುದೂರಿನಲ್ಲಿ ಹುಲಿಕಲ್ ನಲ್ಲಿ ಶೆಡ್ ಹಾಕಿದ್ದರು ಎಂದು ನುಡಿಯುತ್ತಾರೆ. ಯಾರ ಜ ಮೀನಿನಲ್ಲಿ ಶೆಡ್ ಹಾಕಿದ್ದರು ಹಾಗೂ ಸದರಿ ಶೆಡ್ ಸ್ವಂತದ್ದ ಎಂದರೆ ಸಾಕ್ಷಿ ಬಾಡಿಗೆಯದ್ದು ಇದ್ದು ಯಾರ ಜಮೀನು ಎಂದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳಿಂದ ಶೆಡ್ ಹಾಕಿದ್ದರು ಎಂದರೆ ಸಾಕ್ಷಿಯು 5-6 ವರ್ಷಗಳಿಂದ ಎಂದು ನುಡಿಯುತ್ತಾರೆ.

ಹುಲಿಕಲ್ ವಿಳಾಸಕ್ಕೆ ನೀವು ಕಾನೂನು ತಿಳುವಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಹಾಜರು ಪಡಿಸಿರುವ ಪಹಣಿಗಳಲ್ಲಿ ಯಾವುದು ನಿಮ್ಮ ಹೆಸರು ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ನನ್ನ ತಾತನವರ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ನಿಮ್ಮ ತಾತನವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು 4 ಜನ ಎಂದು ನುಡಿಯುತ್ತಾರೆ. ಸದರಿಯವರ ಹೆಸರು ಬೆಟ್ಟಸ್ವಾಮಯ್ಯ, ಚಲುವಯ್ಯ, ನರಸಿಂಹಯ್ಯ ಮತ್ತು ಗಿರಿಯಪ್ಪ ಎಂದು ನುಡಿಯುತ್ತಾರೆ, ಹೆಣ್ಣು ಮಕ್ಕಳು ಇರುವುದಿಲ್ಲವಾ ಎಂದರೆ ಸಾಕ್ಷಿ ಇದ್ದಾರೆ ಎಂದು ನುಡಿಯುತ್ತಾರೆ. ಎಷ್ಟು ಜನ ಹೆಣ್ಣು

ಮಕ್ಕಳು ಎಂದರೆ ಸಾಕ್ಷಿ 3 ಎಂದು ನುಡಿಯುತ್ತಾರೆ, ಸದರಿಯವರ ಹೆಸರು ಗಿರಿಯಮ್ಮ , ವರನಂದಮ್ಮ ಮತ್ತು ಚಲುವಮ್ಮ ಎಂದು ನುಡಿಯುತ್ತಾರೆ. ನಿಮ್ಮ ತಾತನವರ ಹೆಸರು ಏನು ಎಂದರೆ ಸಾಕ್ಷಿ ಸಿಂಗ್ರಯ್ಯ ಎಂದು ನುಡಿಯುತ್ತಾರೆ. ನಿಮ್ಮ ತಾತನವರ ಮಕ್ಕಳಲ್ಲಿ ವಿಭಾಗ ಆಗಿದೆಯೆ ಎಂದರೆ ಸಾಕ್ಷಿ ಬಾಯಿಮಾತಿನಲ್ಲಿ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ನಿಮ್ಮ ತಾತನವರ ಎಲ್ಲಾ ಮಕ್ಕಳಿಗೂ ಸದರಿ ನೀವು ಹಾಜರು ಪಡಿಸಿರುವ ಪಹಣಿಯ ಜಮೀನಿನಲ್ಲಿ ಭಾಗ ಇದೆಯೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಎಲ್ಲಾ ಜಮೀನುಗಳಲ್ಲಿ ಸುಮಾರು 20 ವರ್ಷದ ಅಡಿಕೆ ಮರಗಳು ಇವೆ ಎಂದು ತೋರಿಸಲು ಯಾವುದೇ ದಾಖಲೆ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಪಹಣಿಯಲ್ಲಿ ನಮೂದು ಇದೆ ಹಾಗು ಪೋಟೋ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಪಹಣಿಗಳು 2024-2025ರ ಪಹಣಿಗಳು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 20ವರ್ಷಗಳ ಹಿಂದೆ ಸದರಿ ಅಡಿಕೆ ಮರಗಳು ಇದ್ದ ಬಗ್ಗೆ ಪಹಣಿಯಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿ ಇತ್ತೀಚೆಗೆ ಪಹಣಿಯಲ್ಲಿ ನಮೂದು ಅಗುತ್ತಿದೆ ಎಂದು ನುಡಿಯುತ್ತಾರೆ. 2024-2025 ಪಹಣಿಯಲ್ಲಿ ಮಾತ್ರ ಅಡಿಕೆ ಬೆಳೆ ಎಂದು ನಮೂದು ಮಾಡಿಸಿರುತ್ತೀರಿ ಎಂದರೆ ಸಾಕ್ಷಿ 2022 ರಿಂದಲೂ ಇದೆ ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳ ಹಿಂದೆ ಅಡಿಕೆ ಬೆಳೆ ಎಂದು ನಮೂದು ಮಾಡಿಸಿರುತ್ತೀರಿ ಎಂದರೆ ಸಾಕ್ಷಿ ಸಮೀಕ್ಷೆ ಮಾಡಿದಾಗ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ವರ್ಷ ಸಮೀಕ್ಷೆ ಮಾಡಿರುತ್ತಾರೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಪೋಟೋವನ್ನು ನಿಮ್ಮ ಮೊಬೈಲ್ ನಲ್ಲೆ ತೆಗೆದಿರುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಪೋಟೋಗಳು ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದು ಸರ್ವೆ ಅಧಿಕಾರಿಗಳಿಂದ ಧೃಡೀಕರಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯತ್ತಾರೆ. ನಿಪಿ-11 ರಿಂದ 13ರ ಪೋಟೋಗಳು ನಿಮ್ಮ ಜಮೀನಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಅದೇ ರೀತಿ ನೀವು ಹಾಜರು ಪಡಿಸಿರುವ ಪಹಣಿಗಳೂ ಸಹ ನಿಮ್ಮ ಕುಟುಂಬಕ್ಕೆ ಸಂಬಂಧಪಟ್ಟಿದ್ದಲ್ಲ ಹಾಗೂ

ನಿಮ್ಮ ತಾತ ಸಿಂಗ್ರಯ್ಯ ರವರಿಗೂ ಸಹ ಸಂಬಂಧಪಟ್ಟಿದ್ದಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ತಾತ ಸಿಂಗ್ರಯ್ಯ ಅಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಯಾವುದೇ ಅಡಿಕೆ ಬೆಳೆ ಮಾಡುತ್ತಿರುವುದಿಲ್ಲ ಹಾಗೂ ಅಡಿಕೆ ವ್ಯಾಪಾರವನ್ನೂ ಸಹ ಮಾಡುತ್ತಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಆರೋಪಿ ನಡುವೆ ಯಾವುದೇ ಅಡಿಕೆ ವ್ಯಾಪಾರ ಮಾಡುತ್ತಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಅಡಿಕೆ ವ್ಯಾಪಾರ ಮಾಡಬೇಕಾದರೆ ಸಂಬಂಧಪಟ್ಟ ಇಲಾಖೆಯಿಂದ ಪರವಾನಗಿ ಪಡೆಯ ಬೇಕು ಎಂದರೆ ಸಾಕ್ಷಿ ಅದು ಆರೋಪಿಯರಿಗೆ ಗೊತ್ತು ಎಂದು ನುಡಿಯುತ್ತಾರೆ. ಆರೋಪಿಯು ಕೂಲಿ ಕೆಲಸ ಮಾಡುತ್ತಿದ್ದು ಯಾವುದೇ ಅಡಿಕೆ ವ್ಯಾಪಾರ ಮಾಡುತ್ತಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ದಿನಾಂಕ 25.01.2024 ರಂದು ಆರೋಪಿಯು ಎಲ್ಲಾ ಚೆಕ್ಕುಗಳು ಕಳೆದಿರುತ್ತವೆ ಎಂದು ಸಂಬಂಧಪಟ್ಟ ಬ್ಯಾಂಕ್ ನವರಿಗೆ ಅರ್ಜಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಉದ್ದೇಶ ಪೂರ್ವಕವಾಗಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 23.05.2024 ರಂದು ಆರೋಪಿಯು ನಿಮಗೆ ಯಾವುದೇ ಚೆಕ್ ಅನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಚೆಕ್ಕಿನಲ್ಲಿ ಇರುವ ಸಹಿ ಕೂಡ ಆರೋಪಿಯದ್ದು ಅಲ್ಲ ಎಂದರೆ ಸಾಕ್ಷಿಯು ಅವರದ್ದೆ ಎಂದು ನುಡಿಯುತ್ತಾರೆ. ಆರೋಪಿಯಿಂದ ಹಣವನ್ನು ಲಪಟಾಯಿಸಲು ಹಾಗೂ ಅವರಿಗೆ ತೊಂದರೆ ಕೊಡಲುಬ ಆರೋಪಿಯ ಸರಿಯಾದ ವಿಳಾಸಕ್ಕೆ ಕಾನೂನು ತಿಳುವಳಿಕೆ ನೀಡದೆ ಸುಳ್ಳು ಕಾನೂನು ತಿಳುವಳಿಕೆಯನ್ನು ಸೃಷ್ಟಿಸಿಕೊಂಡು ಸುಳ್ಳು ದೂರನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಈ ಪ್ರಕರಣಕ್ಕೋಸ್ಕರ ಪೋಟೋ ಮತ್ತು ಆರ್ ಟಿ ಸಿ ಗಳನ್ನು ಸೃಷ್ಟಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಆರೋಪಿಯ ನಡುವೆ ಯಾವುದೇ ಅಡಿಕೆ ವ್ಯಾಪಾರ ನಡೆದಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಒಂದು ವೇಳೆ ಅಡಿಕೆ ವ್ಯಾಪಾರ ನಡೆದಿದ್ದರೆ ಕರಾರು ಆಗುತ್ತಿತ್ತು ಎಂದರೆ ಸಾಕ್ಷಿ ಹಳ್ಳಿ ಕಡೆ ಬಾಯಿಮಾತಿನಲ್ಲಿ ಕರಾರು ಮಾಡುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಅನುಕೂಲಕ್ಕೆ ತಕ್ಕಂತೆ ಚೆಕ್ಕಿನಲ್ಲಿ

ಸಹಿಯನ್ನು ಸೃಷ್ಟಿಸಿಕೊಂಡು ಆರೋಪಿಗೆ ತೊಂದರೆ ಕೊಡಲು ಸುಳ್ಳು ದೂರನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಆರೋಪಿಯ ನಡುವೆ ಅಡಿಕೆ ವ್ಯಾಪಾರ ಆಗಿರುತ್ತದೆ ಎಂದು ಹೇಳಿದ್ದು ಆ ಸಂಬಂಧ ಕರಾರು ಅಥವಾ ಏನಾದರೂ ದಾಖಲೆಗಳು ಆಗಿದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**